ಬಿ.ಜೆ.ಪಿ. ಯವರು ಹೋರಾಟ ಮಾಡುತ್ತೇವೆ ಎಂದು ಹೇಳಿದ ನಂತರ ಸರ್ಕಾರದಿಂದ 50 ಲಕ್ಷ ರೂಪಾಯಿ ಬಿಡುಗಡೆ ಮಾಡುತ್ತೇವೆ ಎಂದು ಹೇಳಿ ಒಪ್ಪಿಕೊಂಡಿದ್ದಾರೆ. ಆನಂತರ ಜಿಲ್ಲಾಧಿಕಾರಿಗಳು ನನ್ನನ್ನು ಫೋನ್ ಮೂಲಕ ಕರೆದು ಸಂಬಂಧಪಟ್ಟ ವಸತಿ ಮತ್ತು ನಗರಾಭಿವೃದ್ಧಿ ಕಾರ್ಯದರ್ಶಿಯವರೊಡನೆ ನಾನು ಮಾತನಾಡಿದ್ದೇನೆ, ಈ 50,52,080 ರೂಪಾಯಿಗಳ ಬಡ್ಡಿಯನ್ನು ರದ್ದು ಮಾಡುತ್ತೇವೆ ಎಂದು ಅವರು ಒಪ್ಪಿಕೊಂಡಿದ್ದಾರೆ. ಜೊತೆಗೆ ಐದು ಲಕ್ಷ ರೂಪಾಯಿಗಳನ್ನು ಏನು ಮುರಿದುಕೊಂಡಿದ್ದಾರೆ. ಅದನ್ನು ವಾಪಸ್ಸು ಕೊಡಲಿಕ್ಕೆ ಒಪ್ಪಿಕೊಂಡಿದ್ದಾರೆ ಎಂದು ಜಿಲ್ಲಾಧಿಕಾರಿಗಳು ರೈಟಿಂಗ್ನಲ್ಲಿ ನನಗೆ ಪತ್ರವನ್ನು ಕೊಟ್ಟಿದ್ದಾರೆ. ಈ ಪತ್ರಕ್ಕೆ ಸರ್ಕಾರ ಬೆಲೆ ಕೊಡುತ್ತದೆಯೇ? ಈ ಮಾತುಕತೆ ಜಿಲ್ಲಾಧಿಕಾರಿಗಳಿಗೆ ಮತ್ತು ನಗರಾಭಿವೃದ್ಧಿ ಇಲಾಖೆಯ ಕಾರ್ಯದರ್ಶಿಯವರ ನಡುವೆ ದೂರವಾಣಿ ಮೂಲಕ ನಡೆದಿರುವುದು ನಿಜವಲ್ಲವೇ? ಇದು ನನ್ನ ಪ್ರಶ್ನೆ.

ಶ್ರೀ ಚೌಡರೆಡ್ಡಿ: ಅಧ್ಯಕ್ಷರೇ, ಇದರಲ್ಲಿ ಕರಾರುವಾಕ್ಕಾಗಿ ಏನು ಕಾನೂನು ಪ್ರಕಾರವಾಗಿ ಬಡ್ಡಿಯನ್ನು ಮುರಿದುಕೊಳ್ಳಬೇಕೋ, ಅದನ್ನು ಒಂದು ವೇಳೆ ಫೈನಾನ್ಸ್ ಡಿಪಾರ್ಟ್ಮೆಂಟ್ನವರು ಮುರಿದುಕೊಂಡಿದ್ದರೆ, ಅದನ್ನು ನಾವು ಎಷ್ಟು ಚಾರ್ಜ್ ಮಾಡಬೇಕೋ ಅಷ್ಟು ಮಾಡಿ ಮಿಕ್ಕಿದ್ದನ್ನು ಖಂಡಿತವಾಗಿಯೂ ವಾಪಸ್ಸು ಕೊಡುತ್ತೇವೆ.

ಶ್ರೀ ಕೆ.ಎಸ್. ಈಶ್ವರಪ್ಪ: ಜಿಲ್ಲಾಧಿಕಾರಿಗಳ ಪತ್ರಕ್ಕೆ ನೀವು ಏನು ಹೇಳುತ್ತೀರಿ? ಜಿಲ್ಲಾಧಿಕಾರಿಗಳು ರೈಟಿಂಗ್ನಲ್ಲಿ ನನಗೆ ಪತ್ರ ಕೊಟ್ಟಿದ್ದಾರೆ.

ಶ್ರೀ ಚೌಡರೆಡ್ಡಿ: ನನ್ನ ಗಮನಕ್ಕೆ ಅದು ಬಂದಿಲ್ಲ. ಅದನ್ನು ನಾನು ಪರಿಶೀಲನೆ ಮಾಡುತ್ತೇನೆ.

ಅಧ್ಯಕ್ಷರು: ಅವರು ಪರಿಶೀಲನೆ ಮಾಡುತ್ತಾರಂತೆ.

ನಿಯಮ 334ರ ಮೇಲೆ ಚರ್ಚೆ

(i) ಪರ್ಮಿಟ್ ಪಡೆದು ಮಂಗಳೂರು – ಬೆಂಗಳೂರು ನಡುವೆ ಓಡಾಡುತ್ತಿರುವ ಸುವಿಹಾರಿ ಬಸ್ಸುಗಳ ಬಗ್ಗೆ

ಶ್ರೀ ಕೆ. ವಿನಯಕುಮಾರ್ ಸೊರಕೆ (ಪುತ್ತೂರು): ಮಾನ್ಯ ಅಧ್ಯಕ್ಷರೇ, ದಕ್ಷಿಣ ಕನ್ನಡ ಜಿಲ್ಲೆಯ ಮಂಗಳೂರಿನಿಂದ ಮಂಗಳೂರು-ಬೆಂಗಳೂರು ನಡುವೆ ಪ್ರತಿದಿನ 50ಕ್ಕೂ ಮಿಕ್ಕಿ ಸುವಿಹಾರಿ ಬಸ್ಸುಗಳು ಸಂಚಾರವಿದ್ದು ಇದರಲ್ಲಿ ಮಂಗಳೂರು ಕೆಎಸ್ಆರ್ಟಿಸಿ ಬಸ್ಸು ನಿಲ್ದಾಣದ ಬಳಿಯಿಂದಲೇ ಬಸ್ಸುಗಳು ಹೊರಡುವುದರಿಂದ ಕೆ.ಎಸ್.ಆರ್.ಟಿ.ಸಿ. ಬಸ್ಸುಗಳಿಗೆ ನಷ್ಟವಾಗುವುದಿಲ್ಲವೇ? ಮಂಗಳೂರಿನಿಂದ ಹೊರಡುವ ಖಾಸಗಿ ಸುವಿಹಾರ ಬಸ್ಸುಗಳು ಪರ್ಮಿಟ್ ಮುಖಾಂತರ ಸಂಚಾರ ಮಾಡುತ್ತಿವೆಯೇ? ಪರ್ಮಿಟ್ ಮುಖಾಂತರ ಎಷ್ಟು ಬಸ್ಸುಗಳು ಸಂಚಾರ ಮಾಡುತ್ತಿವೆ ಎಂಬುದರ ಬಗ್ಗೆ ತಿಳಿಸುವಂತೆ ಮಾನ್ಯ ಸಾರಿಗೆ ಸಚಿವರನ್ನು ಒತ್ತಾಯಪಡಿಸುತ್ತೇನೆ.

ಶ್ರೀ ಹಾರ್ನಳ್ಳಿ ರಾಮಸ್ವಾಮಿ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಮಂತ್ರಿ): ಇದನ್ನು ಮಾನ್ಯ ಸಾರಿಗೆ ಮಂತ್ರಿಗಳ ಗಮನಕ್ಕೆ ತರುತ್ತೇನೆ.

(ii) ಶಿವಮೊಗ್ಗದಲ್ಲಿ ಗೃಹ ನಿರ್ಮಾಣ ಮಂಡಳಿಯಿಂದ ಮನೆ ಹಂಚಿಕೆ

ಶ್ರೀ ಕೆ.ಎಸ್. ಈಶ್ವರಪ್ಪ (ಶಿವಮೊಗ್ಗ): ಮಾನ್ಯ ಅಧ್ಯಕ್ಷರೇ, ಶಿವಮೊಗ್ಗದಲ್ಲಿ ಗೃಹ ನಿರ್ಮಾಣ ಮಂಡಳಿಯಿಂದ ಸುಮಾರು 1300 ಜನರಿಗೆ ಮನೆಗಳನ್ನು ಹಂಚಿಕೆಯಾಗಿದ್ದು ಅವರಿಂದ ಸಾಕಷ್ಟು ಹಣ ಕಟ್ಟಿಸಿಕೊಂಡಿದ್ದೀರಿ. ಆ ಮನೆಗಳನ್ನು ನಿರ್ದಿಷ್ಟವಾಗಿ ಪೂರ್ಣಗೊಳಿಸಲು ಇನ್ನು ಎಷ್ಟು ಹಣ ಬೇಕು? ಈಗಾಗಲೇ ಆ ಮನೆಗಳಿಗೆ ಎಷ್ಟು ಹಣ ಖರ್ಚಾಗಿದೆ? ನಿರ್ದಿಷ್ಟವಾಗಿ ಆ ಮನೆಗಳನ್ನು ಯಾವ ದಿನಾಂಕದಂದು ಆ ಹಂಚಿಕೆದಾರರಿಗೆ ಸ್ವಾಧೀನ ನೀಡುವಿರಿ?